ಬೇಸರವಾಗುತ್ತದೆ' ಎಂದು ಮ್ಯಾಗಿ ಹೇಳಿದಳು.

'ಹಾಗೇನಿಲ್ಲ, ನಾನೇನು ದುಂದುಗಾರನಲ್ಲ. ನಾನೇನು ಭಾರತದ ರಾಜ, ಮಹಾರಾಜ ಅಲ್ಲ. ನಾನು ಮೇಲ್ದರ್ಜೆಯ ಸೀಟುಗಳನ್ನು ತೆಗೆಸಲೆ. ಒಂದು ಪ್ರಶ್ನೆ ನೀನು ಮರ್ಚಂಟ್ ಆಫ್ ವೆನಿಸ್ ಓದಿದ್ದೀಯಾ?'

'ಮೂಲ ಕೃತಿಯನ್ನು ಓದಿಲ್ಲ. ನಮ್ಮ ಶಾಲಾ ದಿನಗಳಲ್ಲಿ ಪುಸ್ತಕದಲ್ಲಿ ಈ ಕತೆ ಇತ್ತು ಅದನ್ನು ಓದಿದ್ದೆ.'

'ಆಯಿತು, ನಾಟಕದ ಒಂದು ಪ್ರತಿ ಕಳಿಸುತ್ತೇನೆ. ನಾಟಕ ನೋಡುವ ಮುನ್ನ ಅದನ್ನು ನಿಗಾವಹಿಸಿ ಓದಿದರೆ ನಿನಗೆ ಅಭಿನಯದ ಬಗ್ಗೆ ತಿಳಿಯುತ್ತದೆ' ಎಂದೆ. ಹೊತ್ತಾಗುತ್ತಿದ್ದಂತೆ ನಾನು ಹೊರಟೆ.

ಲೈಸಮ್ ಥಿಯೇಟರ್ ಬುಕ್ಕಿಂಗ್ ಕೌಂಟರ್ ಹತ್ತಿರ ಸೋಮವಾರ 10 ಗಂಟೆಗೆ ನಾನು ಬಂದು ಶನಿವಾರದ ಮ್ಯಾಟನಿಗಾಗಿ ಮೇಲ್ದರ್ಜೆಯ ಮೂರು ಟಿಕೆಟ್‌ಗಳು ದೊರೆಯುತ್ತವೆಯೇ? ಎಂದು ಕೇಳಿದೆ.

'ಇಲ್ಲ ಸಾರ್, ಮುಂದಿನ ಎರಡು ಶನಿವಾರಗಳ ವರೆಗೆ ಸಿಗುವುದಿಲ್ಲ. ರಂಗಮಂದಿರವನ್ನು ಗುತ್ತಿಗೆ ಕೊಡಲಾಗಿದೆ' ಎಂದು ಟಿಕೆಟ್ ಮಾರುವವ ಹೇಳಿದ.

'ಹಾಗಾದರೆ ಮೂರನೇ ಶನಿವಾರ?'

'ಅಂದು ಸಾಧ್ಯವಿದೆ' ಎಂದ ಅವನು ನಾಟಕಗಳ ವಿವರಗಳಿರುವ ಥಿಯೇಟರಿನ ಯೋಜನೆಯನ್ನು ನನಗೆ ತೋರಿಸಿದ. ಆ ದಿನವೂ ಮೇಲ್ದರ್ಜೆಯ ಬಹಳಷ್ಟು ಸೀಟುಗಳು ಉಳಿದಿದ್ದವು. ಮಾರಾಟವಾದ ಸೀಟಿನ ಸಂಖ್ಯೆಗಳನ್ನು ನೀಲಿ ಪೆನ್ಸಿಲ್‌ನಿಂದ ಗುರುತು ಮಾಡಲಾಗಿತ್ತು. ನಾನು ಅದನ್ನು ಪರೀಕ್ಷೆ ಮಾಡಿ ಅಕ್ಕಪಕ್ಕದ ಮೂರು ಸೀಟುಗಳ ಸಂಖ್ಯೆಗಳನ್ನು ಕೊಡಲು ಟಿಕೆಟ್ ಮಾರುವವನಿಗೆ ಹೇಳಿದೆ. ಮೂರು ಸೀಟುಗಳಿಗಾಗಿ 12 ಶಿಲ್ಲಿಂಗ್‌ಗಳನ್ನು ಕೊಟ್ಟೆ.

ಮೂರು ತಿಂಗಳ ಬಳಿಕ ನಾನು, ಮ್ಯಾಗಿ ಮತ್ತು ಅವಳ ತಾಯಿಯನ್ನು ಸಾಕಷ್ಟು ಬಾರಿ ಅವರ ಮನೆಯಲ್ಲಿ ಕಂಡಿದ್ದೆ. ಒಂದು ಬಾರಿ ಮ್ಯಾಗಿಯನ್ನು ಪ್ರಾಣಿ ಸಂಗ್ರಹಾಲಯ ನೋಡಲು ಕರೆದೊಯ್ದಿದ್ದೆ. ಅವಳು ಎಲ್ಲಾ ಬಾಲಕ ಬಾಲಕಿಯರಂತೆ ಭಾರತದ ರಾಜನ ಆನೆಯ ಸವಾರಿ ಮಾಡಿದ್ದಳು. ಆಗ ಅವಳು ತುಂಬಾ ಖುಷಿಪಟ್ಟಳು.

ಆದರೆ, ಅವಳ ಅಣ್ಣನಿಂದ ಈ ವರೆಗೂ ಯಾವುದೇ ವಿಷಯ ತಿಳಿದಿರಲಿಲ್ಲ. ಮಿಸೆಸ್ ಕ್ಲಿಫರ್ಡ್ ಒತ್ತಾಸೆಯ ಮೇರೆಗೆ ಒಂದು ದಿನ ನಾನು ಭಾರತದ ಹೈಕಮಿಷನರ್ ಕಚೇರಿಗೆ ಹೋಗಿ ವಿಚಾರಿಸಿದೆ. ಉತ್ತರ ಪಶ್ಚಿಮ ಗಡಿಯಲ್ಲಿ ಯಾವ ರೆಜಿಮೆಂಟಿನಲ್ಲಿ ಫ್ರಾಂಕ್ ಯುದ್ಧ ಮಾಡುತ್ತಿದ್ದ ಎಂದು ಪ್ರಶ್ನೆ ಮಾಡಿದೆ. ಮಿಸೆಸ್ ಕ್ಲಿಫರ್ಡ್ ಇದನ್ನು ಕೇಳಿ ಬಹಳಷ್ಟು ಚಿಂತಿತಳಾದಳು. ಒಂದು ದಿನ ಮ್ಯಾಗಿ ಬರೆದಿದ್ದ ಪೋಸ್ಟ್‌ಕಾರ್ಡ್ ಬಂದಿತು. ಅದರಲ್ಲಿ,

ಆತ್ಮೀಯ, ಮಿ. ಗುಪ್ತಾ ಅವರಿಗೆ,

ನನ್ನ ತಾಯಿಗೆ ತುಂಬಾ ಕಾಯಿಲೆ. ನನಗೆ ಒಂದು ವಾರದಿಂದ ಕೆಲಸಕ್ಕೆ ಹೋಗಲು ಸಾಧ್ಯವಾಗಿಲ್ಲ. ನೀವು ಬಂದು ನಮ್ಮನ್ನು ಕಂಡರೆ ನಮಗೆ ಬಹಳಷ್ಟು ಉಪಕಾರವಾಗುತ್ತದೆ.

ನಾನು ವಾಸವಾಗಿದ್ದ ಮನೆಯ ಕುಟುಂಬದವರಿಗೆ ಮ್ಯಾಗಿ ಮತ್ತು ಅವಳ ತಾಯಿಯ ಬಗ್ಗೆ ಹೇಳಿದ್ದೆ. ಬೆಳಗಿನ ತಿಂಡಿಯ ಹೊತ್ತು ಪತ್ರದ ಬಗ್ಗೆ ಮಾತನಾಡಿದೆ. ನನ್ನ ಮನೆಯ ಮಾಲೀಕಳು ನೀವು ಹೋಗುವಾಗ ಕೊಂಚ ದುಡ್ಡನ್ನು ತೆಗೆದುಕೊಂಡು ಹೋಗಿರಿ. ಒಂದು ವಾರ ಆ ಹುಡುಗಿ ಕೆಲಸಕ್ಕೆ ಹೋಗಲು ಸಾಧ್ಯವಾಗಿಲ್ಲ. ಆದ್ದರಿಂದ ಅವಳಿಗೆ ಸಂಬಳ ಪಡೆಯಲು ಆಗಿರಲಿಕ್ಕಿಲ್ಲ. ಬಹುಶಃ